ದಿಃ 02.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಕೆ.ಎಂ.ಪಿ., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ವಾದಿ ಸಂಸ್ಥೆಯು ನನಗೆ ನೀಡಿರುವ ಅಧಿಕಾರ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ದಿಃ 06.10.1952 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ಕೂವೆ ಗ್ರಾಮದ ಸರ್ವೆ ನಂಬರ್ 87 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, ಕೂವೆ ಗ್ರಾಮದ ಸರ್ವೆ ನಂಬರ್ 87 ರ ಕೈ ಬರಹದ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 21.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರದ ಮುಖ್ಯ ವಿಚಾರಣೆಃ ಶ್ರೀ ಕೆ.ಎಂ.ಪಿ., ವಕೀಲರಿಂದ ವಾದಿ ಪರವಾಗಿ

1. ದಿನಾಂಕ 11-08-2000 ದಂದು ರಿಜಿಸ್ಟ್ರರ್ ಆಫ್ ಕಂಪೆನಿಸ್ ನೀಡಿದ ಸರ್ಟಿಫಿಕೇಟ್ ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು,
2. ಪಾಟೀ ಸವಾಲುಃ ಶ್ರೀ ಎಂ.ಎಂ.ಆರ್ ವಕೀಲರು ಕಾಲಾವಕಾಶ ಕೋರಿದ್ದು ಪಾಟೀ ಸವಾಲಿಗೆ ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ದಿಃ 13.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಎಂ.ಎಂ.ಆರ್ ವಕೀಲರಿಂದ ಪ್ರತಿವಾದಿ ಪರವಾಗಿ

5. ನಾನು ವಾದಿ ಸಂಸ್ಥೆಯ ಕಾನೂನು ಮ್ಯಾನೇಜರ್ ಆಗಿ 1 ವರ್ಷ 8 ತಿಂಗಳಾಗಿರುತ್ತದೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನಾನು ಬೇರೆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆನು. ದಾವಾ A schedule ಆಸ್ತಿಯು 24-28 ಎಕರೆ ವಿಸ್ತೀರ್ಣ ಇರುತ್ತದೆ. ದಾವಾ A schedule ಆಸ್ತಿಯಲ್ಲಿ ಎಷ್ಟು ಕರಾಬು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ A schedule ಆಸ್ತಿಯು ಸರ್ವೆ ಆಗಿರುವುದಿಲ್ಲ ಎಂದರೆ ಸರಿ. ದಾವಾ A schedule ಆಸ್ತಿಯು ಸರ್ವೆ ಆಗದೇ ಇರುವುದರಿಂದ ದಾವಾ A schedule ಆಸ್ತಿಯ ಚೆಕ್ಕು ಬಂದಿ ಹೇಳಲು ಸಾಧ್ಯವಾಗುವುದಿಲ್ಲ ಎಂದರೆ ಸಾಕ್ಷಿಯು ವಾದಿ ಸಂಸ್ಥೆಯು ದಾವಾ ಆಸ್ತಿಯ ಸ್ವಾಧೀನ ಇರುವುದರಿಂದ ಚೆಕ್ಕು ಬಂದಿ ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ದಾವಾ A schedule ಆಸ್ತಿಯನ್ನು ಸರ್ವೆ ಮಾಡಿಸಲು 2019 ರಲ್ಲಿ ನಾವು ಪ್ರಯತ್ನಪಟ್ಟಿರುತ್ತೇವೆ. 2019 ರಲ್ಲಿ ಅರ್ಜಿ ಕೊಟ್ಟ ನಂತರ ಸರ್ವೆ ಆಗಿರುವುದಿಲ್ಲ ಆದರೆ ಯಾವ ಕಾರಣಕ್ಕಾಗಿ ಸರ್ವೆ ಆಗಿರುವುದಿಲ್ಲ ಎಂದು ನನಗೆ ಗೊತ್ತಿಲ್ಲ. ವಾದಿಯು ಸರ್ವೆ ಮಾಡಿಸಲು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆಗೆ ಸಲ್ಲಿಸಿರುವ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ತೊಂದರೆ ಇರುತ್ತದೆ. ಸದರಿ ಪ್ರತಿಯು ಜೆರಾಕ್ಸ್ ಪ್ರತಿ ಆಗಿರುವುದರಿಂದ ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇರುತ್ತದೆ. ಸರ್ವೆ ಇಲಾಖೆಯಿದ ಅರ್ಜಿಯ ದೃಢೀಕೃತ ನಕಲನ್ನು ಪಡೆದುಕೊಳ್ಳಲು ಸಾಧ್ಯ ಇರುತ್ತದೆ ಎಂದರೆ ಸರಿ.

6. ವಾದಿ ಸಂಸ್ಥೆಯು ಸರ್ವೆ ಮಾಡಿಸಲು ಯಾವುದೇ ಅರ್ಜಿ ಸಲ್ಲಿಸದೇ ಇದ್ದರೂ

ಅರ್ಜಿ ಸಲ್ಲಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ A schedule ಆಸ್ತಿಯು ಕ್ರಯಪತ್ರದ ಮೂಲಕ Coffee lands company ಇಂದ 1999 ರಲ್ಲಿ ಕಂಪೆನಿ ಪಿಟಿಷನ್ ದಾಖಲು ಮಾಡಿ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ವಾದಿ ಸಂಸ್ಥೆಗೆ ಬಂದಿರುತ್ತದೆ. ದಾವಾ ಆಸ್ತಿಗೆ ಎಷ್ಟು ಮೌಲ್ಯವನ್ನು ನೀಡಿ ವಾದಿ ಸಂಸ್ಥೆ ಖರೀದಿ ಮಾಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ಕ್ರಯಪತ್ರದಲ್ಲಿ ಏನು ಚೆಕ್ಕು ಬಂದಿ ನಮೂದಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ A schedule ಆಸ್ತಿಯ ಪೂರ್ವ ದಿಕ್ಕಿಗೆ ಸರ್ವೆ ನಂಬರ್ 86 ರ ಆಸ್ತಿ ಇರುತ್ತದೆ. ಪಶ್ಚಿಮಕ್ಕೆ ಸರ್ವೆ ನಂಬರ್ 88 ರ ಆಸ್ತಿ ಇರುತ್ತದೆ. ಉತ್ತರಕ್ಕೆ ಸರ್ವೆ ನಂಬರ್ 90 ರ ಆಸ್ತಿ ಇರುತ್ತದೆ. ದಕ್ಷಿಣಕ್ಕೆ ಸರ್ವೆ ನಂಬರ್ 275 ರ ಆಸ್ತಿ ಇರುತ್ತದೆ. ಸರ್ವೆ ನಂಬರ್ 275 ಆಸ್ತಿಯು ಪಹಣಿ ಪತ್ರದ ಪ್ರಕಾರ ಸರ್ಕಾರಿ ಜಮೀನು ಆಗಿರುತ್ತದೆ.

7. ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ. ಸಮಯಾವಕಾಶ ನೀಡಲಾಗಿದೆ.

ಮರು ವಿಚಾರಣೆಃ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ದಿಃ 07.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಶ್ರೀ ಎಂ.ಎಂ.ಆರ್ ವಕೀಲರಿಂದ ಪ್ರತಿವಾದಿ ಪರವಾಗಿ

3. ಈ ದಾವೆಯನ್ನು ವಾದಿಯು 1 ರಿಂದ 7 ನೇ ಪ್ರತಿವಾದಿಗಳ ವಿರುದ್ಧ ದಾಖಲು ಮಾಡಿರುತ್ತಾರೆ. 1 ರಿಂದ 7 ನೇ ಪ್ರತಿವಾದಿಗಳು ತಳಗೂರು ಗ್ರಾಮದ ವಾಸಿಗಳು ಆಗಿರುತ್ತಾರೆ. ತಳಗೂರು ಗ್ರಾಮದಲ್ಲಿ ಎಲ್ಲಿ ವಾಸವಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರು ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿಯ ತಂದೆಯ ಹೆಸರು ನನಗೆ ನೆನಪಿಲ್ಲ. 6 ಮತ್ತು 7 ನೇ ಪ್ರತಿವಾದಿಗಳ ಪತಿಯ ಹೆಸರು ನನಗೆ ಗೊತ್ತಿಲ್ಲ. ದಾವ ಬಿ ಶೆಡ್ಯೂಲ್ ಆಸ್ತಿಯು 1 ಎಕರೆ 16 ಗುಂಟೆ ವಿಸ್ತೀರ್ಣ ಇರುತ್ತದೆ. ದಾವ ಬಿ ಶೆಡ್ಯೂಲ್ ಆಸ್ತಿಯಲ್ಲಿ ಯಾವುದೇ ಕರಾಬು ಇರುವುದಿಲ್ಲ. ದಾವ ಬಿ ಶೆಡ್ಯೂಲ್ ಆಸ್ತಿಯ ಪೂರ್ವಕ್ಕೆ ರಸ್ತೆ ಇರುತ್ತದೆ, ಪಶ್ಚಿಮ ಮತ್ತು ಉತ್ತರಕ್ಕೆ 1 ರಿಂದ 3 ನೇ ಪ್ರತಿವಾದಿಗಳ ಆಸ್ತಿ ಇರುತ್ತದೆ. ದಕ್ಷಿಣಕ್ಕೆ 7 ನೇ ಪ್ರತಿವಾದಿಯ ಮನೆ ಇರುತ್ತದೆ. ದಾವ ಬಿ ಶೆಡ್ಯೂಲ್ ಆಸ್ತಿಯ ಪಶ್ಚಿಮ ಮತ್ತು ಉತ್ತರಕ್ಕೆ ಇರುವ 1 ರಿಂದ 3 ನೇ ಪ್ರತಿವಾದಿಗಳ ಆಸ್ತಿಯ ಸರ್ವೆ ನಂಬರ್ ನನಗೆ ನೆನಪಿಲ್ಲ. 1 ರಿಂದ 3 ನೇ ಪ್ರತಿವಾದಿಗಳ ಜಮೀನು ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಯ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಯ ಮನೆಯು ಎಷ್ಟು ವಿಸ್ತೀರ್ಣದಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವ ಬಿ ಶೆಡ್ಯೂಲ್ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಇರುವ ರಸ್ತೆಯು ಸರ್ವೆ ನಂಬರ್ 87 ರಲ್ಲಿ ಇರುತ್ತದೆ. ಸದರಿ ರಸ್ತೆಯು ಎಷ್ಟು ಅಗಲ ಇರುತ್ತದೆ ಮತ್ತು ಎಷ್ಟು ಕಿ.ಮೀ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವ ಬಿ ಶೆಡ್ಯೂಲ್ ಆಸ್ಯನ್ನು ಸರ್ವೆ ಮಾಡಿಸಿರುತ್ತೇವೆ.

ದಾವ ಬಿ ಶೆಡ್ಯೂಲ್ ಆಸ್ತಿಯನ್ನು ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ ಎನ್ನುವ ಬಗ್ಗೆ ಸರ್ವೆ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸರ್ವೆ ಮಾಡಲು ಅರ್ಜಿ ಸಲ್ಲಿಸಿರುತ್ತೇವೆ ಆದರೆ ಸರ್ವೆ ಇಲಾಖೆಯಿಂದ ಸರ್ವೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವ ಎ ಶೆಡ್ಯೂಲ್ ಆಸ್ತಿಯ ಯಾವ ಭಾಗದ ದಾವ ಬಿ ಶೆಡ್ಯೂಲ್ ಆಸ್ತಿಯು ಬರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವ ಬಿ ಶೆಡ್ಯೂಲ್ ಆಸ್ತಿಯನ್ನು 1 ರಿಂದ 3 ನೇ ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಎ ಶೆಡ್ಯೂಲ್ ಆಸ್ತಿಯ ಯಾವ ದಿಕ್ಕಿನಿಂದ ಪ್ರತಿವಾದಿಗಳು ದಾವ ಬಿ ಶೆಡ್ಯೂಲ್ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವ ಬಿ ಶೆಡ್ಯೂಲ್ ಆಸ್ತಿಯನ್ನು ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ ಎಂದು ನನಗೆ ವಾದಿ ಸಂಸ್ಥೆಯ ಮ್ಯಾನೇಜರ್ ತಿಳಿಸಿರುತ್ತಾರೆ. ನನಗೆ ಸದರಿ ಒತ್ತುವರಿಯ ಬಗ್ಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಖಾಸಗಿ ಸರ್ವೆಯ ಪ್ರಕಾರ ಒತ್ತುವರಿ ಮಾಡಿರುವುದು ನನಗೆ ಗಮನಕ್ಕೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಖಾಸಗಿ ಸರ್ವೆಯನ್ನು ಮೂಡಿಗೆರೆಯ willfred ರವರು ಮಾಡಿರುತ್ತಾರೆ. ಯಾವ ವರ್ಷ ಸದರಿ ಖಾಸಗಿ ಸರ್ವೆ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಖಾಸಗಿ ಸರ್ವೆಯ ನಕ್ಷೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಹೇಳಿದಂತೆ ಯಾವುದೇ ಖಾಸಗಿ ಸರ್ವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ. ಸಮಯಾವಕಾಶ ನೀಡಲಾಗಿದೆ. )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿಃ 01.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಶ್ರೀ ಎಂ.ಎಂ.ಆರ್ ವಕೀಲರಿಂದ ಪ್ರತಿವಾದಿ ಪರವಾಗಿ

4. ಮೂಡಿಗೆರೆಯ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು 87 ಗೆ ಸಂಬಂಧಿಸಿದಂತೆ ಸಲ್ಲಿಸಿದ್ದೇನೆ. ಸರ್ವೆ ನಂಬರ್ 87 ರ ಪೂರ್ವಕ್ಕೆ ಸರ್ವೆ ನಂಬರ್ 90 ಟಾಟಾ ಕಾಫಿಯ ಆಸ್ತಿ, ಉತ್ತರಕ್ಕೆ ಸರ್ವೆ ನಂಬರ್ 88 ಟಾಟಾ ಕಾಫಿಯ ಆಸ್ತಿ, ದಕ್ಷಿಣಕ್ಕೆ ಸರ್ವೆ ನಂಬರ್ 275, ಪಶ್ಚಿಮಕ್ಕೆ ಸರ್ವೆ ನಂಬರ್ 86 ಟಾಟಾ ಕಾಫಿಯ ಆಸ್ತಿ ಬರುತ್ತದೆ.
5. ಈ ದಾವೆಯಲ್ಲಿ ಕಾಣಿಸಿರುವ ಬಿ ಶೆಡ್ಯೂಲ್ ಆಸ್ತಿಯ ಪೂರ್ವಕ್ಕೆ ಖಾಸಗಿ ರಸ್ತೆ ಮತ್ತು ಟಾಟಾ ಕಾಫಿಯ ಆಸ್ತಿ, ಪಶ್ಚಿಮ ಮತ್ತು ಉತ್ತರಕ್ಕೆ 1 ರಿಂದ 3 ನೇ ಪ್ರತಿವಾದಿಯರು ಅತಿಕ್ರಮಿಸಿಕೊಂಡಿರುವ ಆಸ್ತಿ ಬರುತ್ತದೆ. ದಕ್ಷಿಣಕ್ಕೆ 7 ನೇ ಪ್ರತಿವಾದಿ ಅತಿಕ್ರಮಿಸಿಕೊಂಡಿರುವ ಆಸ್ತಿ ಬರುತ್ತದೆ. ಪ್ರತಿವಾದಿಯರು ಬಿ ಶೆಡ್ಯೂಲ್ ಆಸ್ತಿಯನ್ನು ಅತಿಕ್ರಮಿಸಿಕೊಂಡಿದ್ದಾರೆ ಎಂದು ಖಾಸಗಿ ಸರ್ವೆಯರ್ ರವರು ಮಾಡಿದ ಸರ್ವೆ ದಾಖಲೆಯನ್ನು ಹಾಜರು ಪಡಿಸಿದ್ದೇನೆ. ನಾನು ಆ ರೀತಿಯ ಯಾವುದೇ ಸರ್ವೆ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ವಾದಿಯರೇ 1 ರಿಂದ 3 ನೇ ಪ್ರತಿವಾದಿಯರ ಆಸ್ತಿಯನ್ನು ಅತಿಕ್ರಮಿಸಿದ್ದೇವೆ ಎಂದರೆ ಸರಿಯಲ್ಲ. ನಾವು 1 ರಿಂದ 3 ನೇ ಪ್ರತಿವಾದಿಯರಿಗೆ ತೊಂದರೆ ನೀಡುತ್ತಿದ್ದೇವೆ ಎಂದು ಅವರುಗಳು ನಮ್ಮ ಮೇಲೆ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸಲ್ಲಿಸಿದ್ದಾರೆ, ಆ ದಾವೆ ವಿಚಾರಣೆಯಲ್ಲಿ ಇದೆ ಎಂದು ನುಡಿಯುತ್ತಾರೆ.
6. ದಾವ ಸಿ ಶೆಡ್ಯೂಲ್ ಆಸ್ತಿ 15 ಗುಂಟೆಗೆ ಸಂಬಂಧಿಸಿದಂತೆ ಇರುತ್ತದೆ. ಸಿ ಶೆಡ್ಯೂಲ್ ಆಸ್ತಿಯ ಪೂರ್ವಕ್ಕೆ ಟಾಟಾ ಕಾಫಿಯ ಖಾಸಗಿ ರಸ್ತೆ ಮತ್ತು ಭೂಮಿ ಬರುತ್ತದೆ, ಪಶ್ಚಿಮ ಮತ್ತು ಉತ್ತರಕ್ಕೆ 1 ರಿಂದ 3 ನೇ ಪ್ರತಿವಾದಿಯರು

ಅತಿಕ್ರಮಿಸಿಕೊಂಡಿರುವ ಆಸ್ತಿ ಮತ್ತು ರವಿ ಡಿಸೋಜ ರವರಿಗೆ ಸೇರಿದ ಆಸ್ತಿ ಬರುತ್ತದೆ. ದಕ್ಷಿಣಕ್ಕೆ ಟಾಟಾ ಕಾಫಿಯ ಆಸ್ತಿ ಬರುತ್ತದೆ. 1 ರಿಂದ 3 ನೇ ಪ್ರತಿವಾದಿಯರು ನಮ್ಮ ಆಸ್ತಿಯನ್ನು ಒತ್ತುವರಿ ಮಾಡಿದ ಬಗ್ಗೆ ಭೂ ಮಾಪನ ಇಲಾಖೆಯವರಿಗೆ ದೂರನ್ನು ಸಲ್ಲಿಸಿದ್ದೇವೆ. ಆ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಖಾಸಗಿ ಸರ್ವೆಯರ್ ರವರು ಅಳತೆ ಮಾಡಿದ್ದರಿಂದ 1 ರಿಂದ 3 ನೇ ಪ್ರತಿವಾದಿಯರು ಸಿ ಶೆಡ್ಯೂಲ್ ನ 15 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದಾರೆ ಎಂದು ತಿಳಿದು ಬಂತು. ಆ ಸರ್ವೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ. 1 ರಿಂದ 3 ನೇ ಪ್ರತಿವಾದಿಯರು ಸಿ ಶೆಡ್ಯೂಲ್ ನ 15 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸರ್ವೆ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

7. ದಾವ ಡಿ ಶೆಡ್ಯೂಲ್ ಸ್ವತ್ತು 3 ಗುಂಟೆಗೆ ಸಂಬಂಧಿಸಿದ್ದು. ಡಿ ಶೆಡ್ಯೂಲ್ ನ ಪೂರ್ವಕ್ಕೆ ಟಾಟಾ ಕಾಫಿಯ ರಸ್ತೆ ಮತ್ತು ಭೂಮಿ, ಪಶ್ಚಿಮ ಮತ್ತು ಉತ್ತರಕ್ಕೆ 1 ರಿಂದ 3 ನೇ ಪ್ರತಿವಾದಿಯರು ಅತಿಕ್ರಮಿಸಿದ ಆಸ್ತಿ, ದಕ್ಷಿಣಕ್ಕೆ 7 ನೇ ಪ್ರತಿವಾದಿ ಅತಿಕ್ರಮಿಸಿದ ಆಸ್ತಿ ಬರುತ್ತದೆ. 7 ನೇ ಪ್ರತಿವಾದಿಯ ವಾದಿಗೆ ಸೇರಿದ 1 ಎಕರೆ ಆಸ್ತಿಯನ್ನು ಅತಿಕ್ರಮಿಸಿದ್ದಾರೆ. 1 ಎಕರೆ ಆಸ್ತಿಯನ್ನು 7 ನೇ ಪ್ರತಿವಾದಿ ಅತಿಕ್ರಮಿಸಿದ್ದಾರೆ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿದ್ದೇನೆ. 6 ನೇ ಪ್ರತಿವಾದಿ ವಾದಿಗೆ ಸೇರಿದ 3 ಗುಂಟೆ ಆಸ್ತಿಯನ್ನು ಅತಿಕ್ರಮಿಸಿದ್ದಾರೆ. 3 ಗುಂಟೆ ಆಸ್ತಿಯನ್ನು 6 ನೇ ಪ್ರತಿವಾದಿ ಅತಿಕ್ರಮಿಸಿದ್ದಾರೆ ಎಂದು ಹೇಳುವ ಜಾಗದಲ್ಲಿ ಅವರ ಮನೆ ಇದೆಯ ಎಂದರೆ ಸಾಕ್ಷಿ ಮನೆ ಇಲ್ಲ, ಜಾಗ ಇರುತ್ತದೆ ಎಂದು ನುಡಿಯುತ್ತಾರೆ. 6 ನೇ ಪ್ರತಿವಾದಿ ತಲಗೂರು ಗ್ರಾಮದಲ್ಲಿ ವಾಸವಿದ್ದಾರೆ. ದಾವ ಎ ಶೆಡ್ಯೂಲ್ ಆಸ್ತಿ ಕೂವೆ ಗ್ರಾಮದಲ್ಲಿ ಇರುತ್ತದೆ.

8. ಇ ಶೆಡ್ಯೂಲ್ ಆಸ್ತಿಯ ಪೂರ್ವಕ್ಕೆ ಟಾಟಾ ಕಾಫಿಯ ರಸ್ತೆ ಮತ್ತು ಭೂಮಿ, ಉತ್ತರಕ್ಕೆ 1 ರಿಂದ 3 ಮತ್ತು 6 ನೇ ಪ್ರತಿವಾದಿಯರು ವಾದಿಯ ಆಸ್ತಿಯನ್ನು

ಅತಿಕ್ರಮಿಸಿರುವ ಜಮೀನು, ಪಶ್ಚಿಮ ಮತ್ತು ದಕ್ಷಿಣಕ್ಕೆ ರವಿ ಡಿಸೋಜ ರವರ ಆಸ್ತಿ ಬರುತ್ತದೆ. ದಾವ ಶೆಡ್ಯೂಲ್ ಆಸ್ತಿಗಳಿಗೆ ಕಾಣಿಸಿರುವ ಚಕ್ಕುಬಂದಿಯನ್ನು ತೋರಿಸಲು ಖಾಸಗಿ ಭೂ ಮಾಪಕರು ನೀಡಿರುವ ಭೂ ಮಾಪನ ವರದಿಯನ್ನು ಹಾಜರು ಪಡಿಸಿದ್ದೇನೆ. ನಾನು ಯಾವುದೇ ಭೂ ಮಾಪನ ದಾಖಲೆಯನ್ನು ಹಾಜರು ಪಡಿಸದೇ ಇದ್ದರು ಹಾಜರು ಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಾವು ಈ ದಾವೆಯಲ್ಲಿ ಮಾಲೀಕತ್ವಘೋಷಣೆ , ಪರಿಹಾರ ಮತ್ತು ಸ್ವತ್ತಿನ ಸ್ವಾಧೀನದ ಪರಿಹಾರವನ್ನು ಕೇಳಿದ್ದೇವೆ. ನಷ್ಟ ಪರಿಹಾರವನ್ನು ನಮಗೆ ಆದ ಮಾನಸಿಕ ನೋವು ಮತ್ತು ಆಸ್ತಿಯ ಮೌಲ್ಯದ ಮೇಲೆ ಕೇಳಿದ್ದೇವೆ. ಆಸ್ತಿಯ ಮೌಲ್ಯದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಆಸ್ತಿಗಳ ಸುಳ್ಳು ಮೌಲ್ಯವನ್ನು ಮಾಡಿದ್ದೇವೆ ಎಂದರೆ ಸರಿಯಲ್ಲ.

10. ಪ್ರತಿವಾದಿಗಳು 2018 ರಲ್ಲಿ ನಮಗೆ ನಮ್ಮ ಜಾಗವನ್ನು ಬಿಟ್ಟುಕೊಡುತ್ತೇವೆ ಎಂದು ತಿಳಿಸಿದ್ದರು. ಯಾವ ದಿನಾಂಕದಂದು ಆ ರೀತಿ ಪ್ರತಿವಾದಿಗಳು ತಿಳಿಸಿದ್ದರು ಎಂದು ಹೇಳಲು ಆಗುವುದಿಲ್ಲ. ದಾವೆಯ ಕಾರಣವನ್ನು ನಾವೇ ಸೃಷ್ಟಿಸಿ ಹೇಳಿದ್ದೇವೆ ಎಂದರೆ ಸರಿಯಲ್ಲ. ದಾವ ಕಾರಣವನ್ನು ಹೇಳಿದ ಸಮಯದಲ್ಲಿ ನಾನು ವಾದಿ ಕಂಪನಿಯಲ್ಲಿ ಕೆಲಸಕ್ಕೆ ಇರಲಿಲ್ಲ. ಆ ಸಮಯದಲ್ಲಿ ವಾದಿ ಕಂಪನಿಯಲ್ಲಿ ನಡೆದ ವ್ಯವಹರಣೆಗಳ ಬಗ್ಗೆ ದಾಖಲೆಯ ಮೇಲೆ ಗೊತ್ತು ವಯಕ್ತಿಕವಾಗಿ ಗೊತ್ತಿಲ್ಲ. ಪ್ರತಿವಾದಿಗಳು ವಾದಿಯ ಆಸ್ತಿಯನ್ನು ಅತಿಕ್ರಮಣ ಮಾಡಿಕೊಂಡಾಗ ಪೊಲೀಸರಿಗೆ ಮತ್ತು ಕಂದಾಯ ಅಧಿಕಾರಿಗಳಿಗೆ ದೂರನ್ನು ಸಲ್ಲಿಸಿದ್ದು ನನಗೆ ನೆನಪಿಲ್ಲ. ಪ್ರತಿವಾದಿಗಳು ವಾದಿಯ ಆಸ್ತಿಯನ್ನು ಒತ್ತುವರಿ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ಪ್ರತಿವಾದಿಯರು ವಾದಿಯ ಆಸ್ತಿಯನ್ನು ಒತ್ತುವರಿ ಮಾಡಿದ್ದರೆ ನಾವು ಪೊಲೀಸರಿಗೆ ಮತ್ತು ಕಂದಾಯ ಇಲಾಖೆಯವರಿಗೆ ದೂರನ್ನು ಸಲ್ಲಿಸುತ್ತಿದ್ದೆವು, ಆ ರೀತಿಯ ಯಾವುದೇ ಒತ್ತುವರಿ ಆಗಿಲ್ಲ ಎಂದರೆ ಸಾಕ್ಷಿ ಪ್ರತಿವಾದಿಗಳೇ ಒತ್ತುವರಿ

ಜಾಗವನ್ನು ಬಿಟ್ಟುಕೊಡುತ್ತೇವೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

11. ಪ್ರತಿವಾದಿಗಳು ನಮ್ಮ ಜಾಗವನ್ನು ಬಿಟ್ಟುಕೊಡುತ್ತೇವೆ ಎಂದು ಬಾಯಿ ಮಾತಿನ ಮೂಲಕ ಹೇಳಿದ್ದರು, ಯಾವುದೇ ಬರವಣಿಗೆಯನ್ನು ಮಾಡಿರಲಿಲ್ಲ. ಪ್ರತಿವಾದಿಯರು ನಮಗೆ ಸೇರಿದ ಜಾಗವನ್ನು ಒತ್ತುವರಿ ಮಾಡದ ಕಾರಣ ಯಾವುದೇ ಜಾಗವನ್ನು ಬಿಟ್ಟುಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳು ಊಯೇಯಿಂದ ಕೂಡಿದ ವಿಚಾರಗಳು, ಆದ್ದರಿಂದ ನಾವು ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ಜಮೀನನ್ನು ಕಬಳಿಸುವ ಹುನ್ನಾರವನ್ನು ನಾವು ಯಾವಾಗಲು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ</u>

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 12.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ.ಎಂ.ಪಿ., ವಕೀಲರಿಂದ ವಾದಿ ಪರವಾಗಿ

12. ಖಾಸಗಿ ಸರ್ವೆಯರ್ ಮೂಲಕ ಸರ್ವೆ ನಂಬರ್ 87 ರ ಸರ್ವೆಯನ್ನು ಮಾಡಿಸಿದ ಬಗ್ಗೆ ನಕ್ಷೆಯನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.6 ಎಂದು, ಕೂವೆ ಗ್ರಾಮದ ನಕ್ಷೆಯ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿ.ಪಿ.7 ಎಂದು, ಪ್ರತಿವಾದಿಗಳು ವಾದಿ ಕಂಪನಿಗೆ ಸಲ್ಲಿಸಿದ ಮನವಿ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿ.ಪಿ.8 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 22.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ.ಎಂ.ಪಿ., ವಕೀಲರಿಂದ ವಾದಿ ಪರವಾಗಿ

13. ಎ.ಡಿ.ಎಲ್.ಆರ್ ಮೂಡಿಗೆರೆ ರವರಿಗೆ ಮಾಹಿತಿ ಹಕ್ಕು ಕಾಯ್ದೆ ಅಡಿ ದಾಖಲೆಗಳನ್ನು ಕೋರಿ ಸಲ್ಲಿಸಿದ ಅರ್ಜಿಯನ್ನು ಹಾಜರು ಪಡಿಸಿದ್ದು ಅದನ್ನು ನಿ.ಪಿ.9 ಎಂದು, Postal order ನ counter file ಹಾಜರು ಪಡಿಸಿದ್ದು ಅದನ್ನು ನಿ.ಪಿ.10 ಎಂದು, ಮಾಹಿತಿ ಹಕ್ಕು ಕಾಯ್ದೆ ಅಡಿ ಅರ್ಜಿ ಸಲ್ಲಿಸಿ ಪಡೆದ ಕೂವೆ ಗ್ರಾಮದ ಸರ್ವೆ ನಂಬರ್ 87 ರ ಹದ್ದು ಬಸ್ತು ನಕ್ಷೆ, ನೋಟೀಸು ಮತ್ತು ಹೇಳಿಕೆಯ ನಕಲುಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿ.ಪಿ.11 ರಿಂದ 13 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಎಂ.ಎಂ.ಆರ್ ವಕೀಲರಿಂದ ಪ್ರತಿವಾದಿ ಪರವಾಗಿ

14. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 02.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಶ್ರೀ ಎಂ.ಎಂ.ಆರ್ ವಕೀಲರಿಂದ ಪ್ರತಿವಾದಿ ಪರವಾಗಿ

15. ನಿ.ಪಿ.6 ರಂತೆ ನಾನು ಹಾಜರು ಪಡಿಸಿರುವ ಸರ್ವೆ ನಂಬರ್ 87 ರ ಸ್ಕೆಚ್ ಒಟ್ಟು 24.28 ಎಕರೆ ಜಮೀನಿಗೆ ಸಂಬಂಧಿಸಿದ್ದು ಆಗಿರುತ್ತದೆ. ನಿ.ಪಿ.6 ಸ್ಕೆಚ್ ಸರ್ವೆ ನಂಬರ್ 87 ರ ಪೂರ್ಣ ವಿಸ್ತೀರ್ಣಕ್ಕೆ ಸಂಬಂಧಿಸಿದ್ದು ಆಗಿರುತ್ತದೆ. ಸರ್ವೆ ಮಾಡಿಸಲು ಅರ್ಜಿಯನ್ನು 2015 ರಲ್ಲಿ ನೀಡಿದ್ದೆವು. ನಿ.ಪಿ.6 ಅನ್ನು ಜನವರಿ 2016 ರಂದು ಪಡೆದುಕೊಂಡಿದ್ದೇವೆ. ನಿ.ಪಿ.6 ರಲ್ಲಿ ಜಮೀನನ್ನು ಯಾರು ಒತ್ತುವರಿ ಮಾಡಿದ್ದಾರೆ ಎಂದು ಹೇಳಿಲ್ಲ. ಒಂದು ವೇಳೆ ಪ್ರತಿವಾದಿಗಳು ಜಮೀನನ್ನು ಒತ್ತುವರಿ ಮಾಡಿದ್ದರೆ ನಿ.ಪಿ.6 ಸ್ಕೆಚ್ ನಲ್ಲಿ ಪ್ರತಿವಾದಿಗಳ ಹೆಸರನ್ನು ಕಾಣಿಸುತ್ತಿದ್ದರು ಎಂದರೆ ಸಾಕ್ಷಿ ನಾವು ಅರ್ಜಿಯನ್ನು ಜಮೀನು ಒತ್ತುವರಿ ಆದ ಬಗ್ಗೆ ಅಳತೆ ಮಾಡಲು ಅರ್ಜಿ ನೀಡಿದ್ದರಿಂದ ಒತ್ತುವರಿ ಆದ ಬಗ್ಗೆ ಮಾತ್ರ ನಿ.ಪಿ.6 ರಲ್ಲಿ ನಮೂದಿಸಿದ್ದಾರೆ ಎಂದು ನುಡಿಯುತ್ತಾರೆ. ನಿ.ಪಿ.6 ನಕ್ಷೆಯಲ್ಲಿ ಯಾರು ಎಷ್ಟು ಜಮೀನನ್ನು ಒತ್ತುವರಿ ಮಾಡಿದ್ದಾರೆ ಎಂದು ಕಾಣಿಸದ ಕಾರಣ ನನಗೆ ಒತ್ತುವರಿಯ ಬಗ್ಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ನಿ.ಪಿ.6 ರ ಪ್ರಕಾರಣ ಯಾರು ಎಷ್ಟು ಜಮೀನನ್ನು ಒತ್ತುವರಿ ಮಾಡಿದ್ದಾರೆ ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

16. ನಾವು ಹಾಜರು ಪಡಿಸಿರುವ ಹದ್ದುಬಸ್ತು ಸರ್ವೆ ದಾಖಲೆಯ ಪ್ರಕಾರ ಯಾರು ಎಷ್ಟು ಒತ್ತುವರಿ ಮಾಡಿದ್ದಾರೆ ಎಂದು ಹೇಳಬಲ್ಲೆ ಮತ್ತು 2018 ರಲ್ಲಿ ಪ್ರತಿವಾದಿಗಳು ತಾವು ಜಮೀನನ್ನು ಒತ್ತುವರಿ ಮಾಡಿದ ಬಗ್ಗೆ ಪತ್ರವನ್ನು ಸಹ ನೀಡಿದ್ದಾರೆ. ಪ್ರತಿವಾದಿಗಳು ನಾನು ಹೇಳಿದಂತೆ ಒತ್ತುವರಿ ಮಾಡಿದ ಬಗ್ಗೆ ಯಾವುದೇ ಪತ್ರವನ್ನು ನಮಗೆ ನೀಡಿಲ್ಲ ಎಂದರೆ ಸರಿಯಲ್ಲ.

17. ನಿ.ಪಿ.7 ರ ಗ್ರಾಮ ನಕ್ಷೆಯನ್ನು ನಾವು 2025 ರಲ್ಲಿ ಸರ್ವೆ ಇಲಾಖೆಯಿಂದ ಪಡೆದುಕೊಂಡಿದ್ದೇವೆ. ನಿ.ಪಿ.7 ಗ್ರಾಮ ನಕ್ಷೆ ಕೂವೆ ಗ್ರಾಮಕ್ಕೆ ಸಂಬಂಧಿಸಿದ್ದು, ನಿ.ಪಿ7 ಗ್ರಾಮ ನಕ್ಷೆಯನ್ನು ನೋಡಿ ದಾವ ಸ್ವತ್ತಿನ

ಚಕ್ಕುಬಂದಿಯನ್ನು ಹೇಳಬಲ್ಲೆ. ನಿ.ಪಿ.7 ನಕ್ಷೆಯ ಪ್ರಕಾರ ದಾವ ಸ್ವತ್ತಿನ ಪೂರ್ವಕ್ಕೆ ಸರ್ವೆ ನಂಬರ್ 86, ಪಶ್ಚಿಮಕ್ಕೆ ಸರ್ವೆ ನಂಬರ್ 90, ಉತ್ತರಕ್ಕೆ ಸರ್ವೆ ನಂಬರ್ 88 ಮತ್ತು ದಕ್ಷಿಣಕ್ಕೆ ಸರ್ವೆ ನಂಬರ್ 275 ಬರುತ್ತವೆ. ಮೇಲೆ ಹೇಳಿದ ಚಕ್ಕುಬಂದಿಯ ಪೈಕಿ  ಸರ್ವೆ ನಂಬರ್ 275 ಸರ್ಕಾರಿ ಜಾಗ ಬರುತ್ತದೆ. ಉಳಿದ ಸರ್ವೆ ನಂಬರ್ ಗಳು ನಮಗೆ ಸೇರಿದ ಆಸ್ತಿಗಳು ಆಗಿರುತ್ತವೆ. ನಿ.ಪಿ.7 ರಲ್ಲಿ ಕಾಣಿಸಿರುವ ಚಕ್ಕುಬಂದಿಯನ್ನೇ ದಾವ ಸ್ವತ್ತಿನಲ್ಲಿ ಕಾಣಿಸಿದ್ದೇವೆ.

18. ಸರ್ವೆ ನಂಬರ್ 86 ರ ಹಿಡುವಳಿದಾರರು ಯಾರು ಎಂದರೆ ಸಾಕ್ಷಿ ನಮ್ಮದೇ ಬರುತ್ತದೆ ಎಂದು ನುಡಿಯುತ್ತಾರೆ. ನಾವು ಹಾಜರು ಪಡಿಸಿರುವ ನಿ.ಪಿ.11 ಹದ್ದುಬಸ್ತು ನಕ್ಷೆಯ ಪ್ರಕಾರ ಸರ್ವೆ ನಂಬರ್ 86 ರ ಹಿಡುವಳಿದಾರರು ಒತ್ತುವರಿ ಮಾಡಿದ್ದಾರೆ ಎಂದು ಕಾಣಿಸಲಾಗಿದೆ ಎಂದರೆ ಸರಿ. ಪ್ರತಿವಾದಿಗಳು ನಮಗೆ ಸೇರಿದ ದಾವ  ಜಮೀನನ್ನು ಸರ್ವೆ ನಂಬರ್ 86 ರಲ್ಲಿ ಒತ್ತುವರಿ ಮಾಡದೇ ಇದ್ದರು ಸಹ ಒತ್ತುವರಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.8 ರಲ್ಲಿ ಹಾಕಿರುವ ಹೆಬ್ಬೆಟ್ಟಿನ ಗುರುತನ್ನು ಹಾಕಿದ ಬಳಿ ಯಾರು ಸಹ ಅದನ್ನು ಗುರುತಿಸಿ ಸಹಿ ಮಾಡಿಲ್ಲ ಎಂದರೆ ಸರಿ. ನಿ.ಪಿ.8 ರಲ್ಲಿ ಕಂಡು ಬರುವ ಹರೀಶ, ರಾಜು, ಸಂತೋಷ, ಚಂದ್ರು, ಶ್ರೀನಿವಾಸ್ ರವರ ಸಹಿಗಳು ಮತ್ತು ಗಿರಿಜಾ ಮತ್ತು ಚಿನ್ನಮ್ಮ ರವರ ಹೆಸರಿನ ಮುಂದೆ ಕಂಡು ಬರುವ ಹೆಬ್ಬೆಟ್ಟಿನ  ಗುರುತುಗಳು ಪ್ರತಿವಾದಿಗಳಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಪ್ರತಿವಾದಿಗಳು ನಿ.ಪಿ.8 ರಂತೆ ದಾಖಲೆಗಳು ಬರೆದುಕೊಟ್ಟು ಸಹಿ ಮತ್ತು ಹೆಬ್ಬೆಟ್ಟಿನ  ಗುರುತು ಹಾಕಿದ್ದರೆ ಆ ದಾಖಲೆಯಲ್ಲಿ ಒತ್ತುವರಿ ಮಾಡಿದ ಜಮೀನಿನ ವಿಸ್ತೀರ್ಣವನ್ನು ನಮೂದಿಸುತ್ತಿದ್ದರು, ನಮೂದಿಸದ ಕಾರಣ ಆ ದಾಖಲೆಗಳನ್ನು ಪ್ರತಿವಾದಿಗಳು ನಮಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿ.ಪಿ.8 ರಲ್ಲಿ 60 ವರ್ಷಗಳಿಂದ ಮನೆಯನ್ನು ನಿರ್ಮಿಸಿಕೊಂಡು ಪಂಚಾಯಿತಿಗೆ ಕಂದಾಯವನ್ನು ಪಾವತಿಸುತ್ತಿದ್ದೇವೆ ಎಂದು ಬರೆಯಲಾಗಿದೆ

ಎಂದರೆ ಪ್ರತಿವಾದಿಗಳು ಆ ರೀತಿ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿ.ಪಿ.8 ದಾಖಲೆಯನ್ನು ನಮ್ಮ ಸಂಸ್ಥೆಯ ವ್ಯವಸ್ಥಾಪಕರಿಗೆ ಪ್ರತಿವಾದಿಗಳು ಬರೆದುಕೊಟ್ಟಿದ್ದಾರೆ. ನಿ.ಪಿ.8 ಅನ್ನು ಟೈಪ್ ಮಾಡಿದವರು ಯಾರು ಎಂದು ಪ್ರತಿವಾದಿಗಳು ನಮಗೆ ತಿಳಿಸದ ಕಾರಣ ನನಗೆ ಹೇಳಲು ಆಗುವುದಿಲ್ಲ. ನಿ.ಪಿ.8 ಅನ್ನು ನಮ್ಮ ಸಂಸ್ಥೆಯಲ್ಲಿಯೇ ನಾವು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಉಳಿದ ದಾಖಲೆಗಳನ್ನು ಈ ದಾವೆಗೆ ಅನುಕೂಲ ಆಗಲಿ ಎಂದು ಸೃಷ್ಟಿಸಿ ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ್ವಾಧೀನ ಇರುವ ಜಾಗವನ್ನು ಲಪಟಾಯಿಸುವ ಉದ್ದೇಶವನ್ನು ನಾವು ಹೊಂದಿದ್ದೇವೆ ಎಂದರೆ ಸರಿಯಲ್ಲ.

19. ನಿ.ಪಿ.13 ಅರ್ಜಿಯಲ್ಲಿ ಜೀವನ್ ಎಂಬ ಹಿಂದೆ ಇದ್ದ ನಮ್ಮ ಸಂಸ್ಥೆಯ ವ್ಯವಸ್ಥಾಪಕರ ಸಹಿ ಇರುತ್ತದೆ. ನಿ.ಪಿ.13 ಹೇಳಿಕೆಯಲ್ಲಿ ಸರ್ವೆ ಇಲಾಖೆಯವರು ಸ್ಥಳಕ್ಕೆ ಬಂದು ಅಳತೆ ಮಾಡಿದಾಗ ಪ್ರತಿವಾದಿಗಳು ಹಾಜರು ಇದ್ದ ಬಗ್ಗೆ ಸಹಿ ಇಲ್ಲ ಎಂದರೆ ಸಾಕ್ಷಿ ನಿ.ಪಿ.13 ರಲ್ಲಿ ಅಳತೆ ಸಮಯದಲ್ಲಿ ಗ್ರಾಮಸ್ಥರು ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿ.ಪಿ.13 ರಲ್ಲಿ ಸಹಿ ಮಾಡಿರುವ ಗ್ರಾಮಸ್ಥರ ಹೆಸರುಗಳನ್ನು ಹೇಳಲು ಆಗುವುದಿಲ್ಲ. ನಿ.ಪಿ.13 ಅನ್ನು ಈ ಕೇಸಿಗಾಗಿ ಸೃಷ್ಟಿಸಿ ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ